ಜಮೀನು ಹೆಚ್ಚುವರಿಯಾಗಿ ಬೇಕೆಂಬುದಾಗಿ ಎ.ಎ.ಐ ಅಧಿಕಾರಿಗಳು ತಿಳಿಸಿರುತ್ತಾರೆ. ಮೈಸೂರು ಜಿಲ್ಲಾಧಿಕಾರಿಗಳು ಇದರ ಮೌಲ್ಯವು ಸುಮಾರು 5 ಕೋಟಿ ರೂ. ಗಳಾಗಬಹುದೆಂದು ಅಂದಾಜಿಸಿರುತ್ತಾರೆ. ಇದಲ್ಲದೇ ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯದ ಎಎಐ ಸಂಸ್ಥೆಯವರು ಸದರಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲು ಆಸಕ್ತಿ ತೋರಿಸಿದ್ದು, ಕರ್ನಾಟಕ ಸರ್ಕಾರವು ನೀರು ಪೂರೈಕೆ ಸ್ಥಳೀಯ ಸುಂಕ ಇತ್ಯಾದಿ ಕೆಲವೊಂದು ರಿಯಾಯ್ತಿ / ವಿನಾಯ್ತಿಗಳನ್ನು ನೀಡುವ ಷರತ್ತುಗಳನ್ನು ಒಪ್ಪಿಕೊಂಡಲ್ಲಿ ವಿಮಾನ ನಿಲ್ದಾಣವನ್ನು ಅಭಿವೃದ್ಧಪಡಿಸಿ ಕಾರ್ಯಾಚರಣೆಗೊಳಿಸುವುದಾಗಿ ತಿಳಿಸಿರುತ್ತಾರೆ. ಇದಲ್ಲದೇ ಕರ್ನಾಟಕ ಸರ್ಕಾರವು AAI ಸಂಸ್ಥೆಯೊಂದಿಗೆ ಮೇಲಿನ ಷರತ್ತುಗಳಿರುವ ತಿಳುವಳಿಕಾ ಜ್ಞಾಪನ ಒಪ್ಪಂದ (MOU) ಮಾಡಿಕೊಳ್ಳಲು ಸಮ್ಮತಿಸಿದೆ.

ಆ) ಸದರಿ ಯೋಜನೆಯು ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ವಿವಿಧ ಇಲಾಖೆಗಳ/ಸಂಸ್ಥೆಗಳ ಹಂತದಲ್ಲಿ ತಾಂತ್ರಿಕ ಹಾಗೂ ಆಡಳಿತಾತ್ಮಕವಾದ ವಿವಿಧ ನಡವಳಿಗಳ ನಂತರ ಕಾಯರೂಪಕ್ಕೆ ಬರುವಂತದಾಗಿದ್ದು ಆದಷ್ಟು ಶೀಘ್ರವಾಗಿ ಪ್ರಾರಂಭಿಸುವ ಆಕಾಂಕ್ಷೆಯನ್ನು ಕರ್ನಾಟಕ ಸರ್ಕಾರ ಹೊಂದಿದೆ. ಮಂಡಳಿ/ನಿಗಮದ ಮುಖಾಂತರ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತದೆ.

ಇ) ರಫ್ತು ಆಧಾರಿತ ಕೈಗಾರಿಕೆಗಳು ಅಂತರಾಷ್ಟ್ರೀಯ ಮಟ್ಟದ ವಸ್ತುಪ್ರದರ್ಶನಗಳಲ್ಲಿ ಭಾಗವಹಿಸುವಾಗ ಅವರಿಗೆ ರಿಯಾಯಿತಿ ದರದಲ್ಲಿ ಸ್ಥಳವಾಕಾಶ ಮತ್ತು ವಿಮಾನಯಾನ ದರದಲ್ಲಿ ರಿಯಾಯಿತಿಗಳನ್ನು ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರ ಮುಖಾಂತರ ಅವಕಾಶ ಮಾಡಿಕೊಡಲಾಗುತ್ತಿದೆ. ಕರಕುಶಲ ಕಸುಬುದಾರರು ತಮ್ಮ ಕಲಾಕೃತಿಗಳನ್ನು / ಉತ್ಪನ್ನಗಳನ್ನು ಮಾರಾಟ ಮಾಡಲು "ದಿಲ್ಲಿ ಹಾತ್" ಮಾದರಿಯ ಒಂದು ಮಾರುಕಟ್ಟೆ ಸಂಕೀರ್ಣವನ್ನು ಮೈಸೂರಿನಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸಿದ್ಧ ಮೈಸೂರು ದಸರಾ ವಸ್ತು ಪ್ರದರ್ಶನ ಸಂಕೀರ್ಣವನ್ನು ಸಹ ಉನ್ನತೀಕರಣಗೊಳಿಸಿ ವರ್ಷಾದ್ಯಂತ ಮಾರುಕಟ್ಟೆ ಸೌಲಭ್ಯ ನೀಡಲು ಸಿದ್ದಗೊಳಿಸಲಾಗುವುದು.

475(1118) ಮಾನ್ಯ ಶ್ರೀ ಎಚ್.ಎನ್. ಶಂಕರಲಿಂಗೇಗೌಡ, ವಿಧಾನ ಸಭಾ ಸದಸ್ಯರು, ಮಾನ್ಯ ಬೃಹತ್ ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲ ಭೂತ ಸಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಮತ್ತು ಸುತ್ತು ಮುತ್ತಲ ಪ್ರದೇಶಗಳಲ್ಲಿರುಚ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಾವುವು (ವಿವರ ನೀಡುವುದು)?

ಆ) ಸದರಿ ಕಾರ್ಖಾನೆಗಳಲ್ಲಿ ಕೆಲಸಾ ಮಾಡುತ್ತಿರುವ ಕನ್ನಡಿಗ ಕಾರ್ಮಿಕರುಗಳ ಸಂಖ್ಯೆ ಎಷ್ಟು ಹಾಗೂ ಕನ್ನಡೇತರ ಕಾರ್ಮಿಕರುಗಳ ಸಂಖ್ಯೆ ಎಷ್ಟು ಹಾಗೂ ಕನ್ನಡೇತರ ಕಾರ್ಮಿಕರುಗಳು ಸಂಖ್ಯೆ ಎಷ್ಟು;

ಇ) ಸದರಿ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಅದ್ಯತೆ ನೀಡಬೇಕೆಂಬ ನಿಯಮಗಳೇನಾದರಾ ಇದೆಯೇ (ವಿವರ ನೀಡುವುದು)

ಈ) ಹಾಗಿದ್ದಲ್ಲಿ, ನಿಯಮ ಉಲ್ಲಂಘಿಸಿದವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಬೃಹತ್ ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲ ಭೂತ ಸೌಕರ್ಯ ಸಚಿವರು) :

ಅ) ಮೈಸೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿರುವ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಈ ಕೆಳಕಂಡಂತಿರುತ್ತವೆ:

1. ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು 52
2. ಸಣ್ಣ ಪ್ರಮಾಣದ ಕೈಗಾರಿಕೆಗಳ 7580

ಆ) ಕನ್ನಡಿಗರು : 43220

ಆ) ಕನ್ನಡೇತರರು : 4803

ಇ) ಡಾ॥ ಸರೋಜಿನಿ ಮಹಿಷಿ ವರದಿ ಪ್ರಕಾರ ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ರಾಜ್ಯ ಕೈಗಾರಿಕಾ ನೀತಿಯನ್ವಯ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಘಟಕಗಳು ಸಿ ಮತ್ತು ಡಿ ಗುಂಪಿನ, ಹುದ್ದೆಗಳಿಗೆ ಶೇ.100 ರಷ್ಟು ಕನ್ನಡಿಗರನ್ನೇ ನೇಮಿಸಬೇಕು ಹಾಗೂ ಒಟ್ಟು ಕಾರ್ಮಿಕರಲ್ಲಿ ಶೇ.80 ರಷ್ಟು ಕನ್ನಡಿಗರಿಗೆ ಉದ್ಯೋಗವಾಕಾಶ ನೀಡಬೇಕೆಂಬ ಷರತ್ತನ್ನು ವಿಧಿಸಲಾಗಿದೆ. 50 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಘಟಕಗಳಲ್ಲಿ ಈ ಷರತ್ತು ಪಾಲನೆ ಬಗ್ಗೆ ಪರಿಶೀಲನ ಜವಾಬ್ದಾರಿಯನ್ನು ಜಿಲ್ಲಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿನ ಏಕಗವಾಕ್ಷಿ ಸಮಿತಿಗೆ ವಹಿಸಲಾಗಿದೆ ಮತ್ತು ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪರಿಶೀಲಿಸುವಂತೆ ಸೂಚಿಸಿದೆ.

ಈ) ನಿಯಮ ಉಲ್ಲಂಘಿಸಿದ ಅಥವಾ ಸಂಪೂರ್ಣವಾಗಿ ಪಾಲಿಸದ ಘಟ್ಟಕಗಳಿಗೆ ಸರ್ಕಾರದಿಂದ ನೀಡಲಾಗುವ ರಿಯಾಯಿತಿಗಳು/ ತೆರಿಗೆ ವಿನಾಯಿತಿ ಸೌಲಭ್ಯಗಳನ್ನು ತಡೆಯಲಾಗುತ್ತದೆ ಹಾಗೂ ನಿಗದಿತ ಪ್ರಮಾಣದಲ್ಲಿ ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗವಕಾಶ ನೀಡಲು ಒತ್ತಾಯಿಸಲಾಗುತ್ತಿದೆ.

476(1119) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ, ವಿಧಾನ ಸಭಾ ಸದಸ್ಯರು (ಚಾಮರಾಜ) ಮಾನ್ಯ ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳಾವುವು ಹಾಗೂ ಮೂಲ ಭೂತ ಸೌಕರ್ಯಗಳೇನು ? (ವಿವರ ಒದಗಿಸುವುದು)

ಆ) ಮೂಲಭೂತ ಸೌಕರ್ಯ ಹೆಚ್ಚಿಸುವ ಬಗ್ಗೆ ಉದ್ದಿಮೆದಾರರಿಂದ ಕೋರಿಕೆ ಸಲ್ಲಿಸಲಾಗಿದೇಯೇ?

ಇ) ಹಾಗಿದಲ್ಲಿ ಸೌಕರ್ಯ ಹೆಚ್ಚಿಸಲು ಸರ್ಕಾರ ಕೈಗೂಂಡ ಕ್ರಮಗಳೇನು ಹಾಗೂ ತಗಲುವ ಬಾಬ್ತು ಎಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈ ಕೆಳಗಿನ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳ ವಿವರ ಈ ಕೆಳಕಂಡಂತಿದೆ.